# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 683 |
| ಸದಸ್ಯರ ಹೆಸರು | ಶ್ರೀ ಕಿಶೋರ್ ಕುಮಾರ್ ಪುತ್ತೂರು |
| ಉತ್ತರಿಸುವ ದಿನಾಂಕ | 12.03.2025 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅತೀ ಹೆಚ್ಚು ಆದಾಯ ನೀಡುತ್ತಿರುವ (ನಂ.1) ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಯಾತ್ರಾರ್ಥಿಗಳಿಗೆ ವಿಶೇಷ ದಿನಗಳಲ್ಲಿ ಮತ್ತು ವಾರದ ರಜಾ ದಿನಗಳಲ್ಲಿ ವಸತಿ ಸಮಸ್ಯೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದಕ್ಷಿಣ ಕನ್ನಡ ಜಿಲ್ಲೆ, ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಾಲಯಕ್ಕೆ ವಿಶೇಷ ದಿನಗಳಲ್ಲಿ ಮತ್ತು ವಾರದ ರಜಾ ದಿನಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸುತ್ತಿದ್ದು, ಶ್ರೀ ದೇವಾಲಯದಲ್ಲಿ ಲಭ್ಯವಿರುವ ಕೊಠಡಿಗಳ ಸಂಖ್ಯೆಗಳ ಮಿತಿಗಿಂತ ಭಕ್ತಾದಿಗಳು ಗಣನೀಯವಾಗಿ ಕ್ಷೇತ್ರಕ್ಕೆ ಆಗಮಿಸಿದಾಗ ಕೊಠಡಿಗಳ ಕೊರತೆ ಉಂಟಾಗುತ್ತಿರುವುದು ಗಮನಕ್ಕೆ ಬಂದಿರುತ್ತದೆ. |
| ಆ) | ಇದರಿಂದಾಗಿ ಸ್ಥಳೀಯರು ಮನೆಗಳಲ್ಲಿ/ ಹೋಮ್ ಸ್ಟೇಗಳಲ್ಲಿ ಯಾತ್ರಾರ್ಥಿಗಳಿಗೆ ವಸತಿಯನ್ನು ನೀಡಿ ಹೆಚ್ಚಿನ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಕುಕ್ಕೆ ಸುಬ್ರಹ್ಮಣ್ಯದ ಸ್ಥಳೀಯ ಮನೆಗಳಲ್ಲಿ / ಹೋಮ್ ಸ್ಟೇಗಳಲ್ಲಿ ಯಾತ್ರಾರ್ಥಿಗಳಿಗೆ ವಸತಿಗಳನ್ನು ನೀಡುತ್ತಿರುವುದು ಶ್ರೀ ದೇವಾಲಯದ ಗಮನಕ್ಕೆ ಬಂದಿದ್ದು, ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಲಭ್ಯ ಸಂಪನ್ಮೂಲಗಳನ್ನು ಬಳಸಿಕೊಂಡು ದೇವಾಲಯದ ವತಿಯಿಂದ ಅಗತ್ಯವಿರುವ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಇ) | ಪ್ರಸ್ತುತ ಕುಕ್ಕೆ ಸುಬ್ರಹ್ಮಣ್ಯ ದೇವಾಲಯದಲ್ಲಿ ಯಾತ್ರಾರ್ಥಿಗಳಿಗೆ ಎಷ್ಟು ವಸತಿ ಗೃಹಗಳಿವೆ; ಎಷ್ಟು ಕೊಠಡಿಗಳು ಲಭ್ಯವಿದೆ; ಈ ವಸತಿ ಗೃಹಗಳಿಂದ ವರ್ಷಕ್ಕೆ ಎಷ್ಟು ಆದಾಯ ಬರುತ್ತಿದೆ; (ಕಳೆದ ಮೂರು ವರ್ಷಗಳ ವಿವರ ಒದಗಿಸುವುದು) | ಪ್ರಸ್ತುತ ಕುಕ್ಕೆ ಸುಬ್ರಹ್ಮಣ್ಯ ದೇವಾಲಯದಲ್ಲಿ ಯಾತ್ರಾರ್ಥಿಗಳಿಗೆ ಲಭ್ಯವಿರುವ ವಸತಿ ಗೃಹಗಳು ಮತ್ತು ಕೊಠಡಿಗಳ ವಿವರ ಈ ಕೆಳಕಂಡಂತಿದೆ:-<br><br>ವಸತಿ ಗೃಹಗಳ ಸಂಖ್ಯೆ: 6<br>ಎ.ಸಿ.ರೂಂ 61<br>ನಾನ್ ಎ.ಸಿ. ರೂಂ- 358<br>**ಒಟ್ಟು 419**<br><br>**ಕಳೆದ 3 ವರ್ಷಗಳ ಆದಾಯದ ವಿವರ (ರೂ.ಗಳಲ್ಲಿ)**<br>2021-22 2,21,87,520-00<br>2022-23 4,73,03,800-00<br>2023-24 5,18,28,900-00 |
| ಈ) | ಸದರಿ ದೇವಸ್ಥಾನದಲ್ಲಿ ಯಾತ್ರಾರ್ಥಿಗಳಿಗೆ ವಸತಿ ವ್ಯವಸ್ಥೆ ಹಾಗೂ ಇತರ ಮೂಲಭೂತ ಸೌಲಭ್ಯಗಳನ್ನು ಹೆಚ್ಚಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ; ಹೊಸದಾಗಿ ವಸತಿ ಗೃಹಗಳ ನಿರ್ಮಾಣಕ್ಕೆ ಕ್ರಮ ವಹಿಸಲಾಗಿದೆಯೆ; | ಪ್ರಸ್ತಾಪಿತ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಯಾತ್ರಾರ್ಥಿಗಳಿಗೆ ವಸತಿ ವ್ಯವಸ್ಥೆ ಹಾಗೂ ಇತರ ಮೂಲಭೂತ ಸೌಲಭ್ಯಗಳನ್ನು ಹೆಚ್ಚಿಸಲು ದಿನಾಂಕ:25.02.2025 ರಂದು ಮಾನ್ಯ ಮುಜರಾಯಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಶ್ರೀ ದೇವಾಲಯದ ಮಾಸ್ಟರ್ ಪ್ಲಾನ್ ಸಮಿತಿಯ 29ನೇ ಸಭೆಯಲ್ಲಿ ಜರೂರಾಗಿ ಆಗಬೇಕಾಗಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಈ ಕೆಳಕಂಡಂತೆ ಅಗತ್ಯ ಕ್ರಮವಹಿಸಲಾಗಿದೆ:- |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | • ದೇವಾಲಯದಲ್ಲಿ ಪ್ರಸ್ತುತ 419 ಕೊಠಡಿಗಳಿದ್ದು, ಭಕ್ತಾಧಿಗಳ ವಾಸ್ತವ್ಯಕ್ಕೆ ವಸತಿ ಗೃಹಗಳ ಬೇಡಿಕೆ ಇರುತ್ತದೆ. ಹಾಗಾಗಿ ಸುಮಾರು 5 ಸಾವಿರ ಕೊಠಡಿಗಳ ಅವಶ್ಯಕತೆ ಇರುವುದನ್ನು ಗಮನಿಸಿ ಮಾಸ್ಟರ್ ಪ್ಲ್ಯಾನ್‌ನ ಪ್ರಥಮ ಹಂತದಲ್ಲಿ 200 ಕೊಠಡಿಗಳ 4 ಬ್ಲಾಕ್ ವಸತಿ ಗೃಹಗಳನ್ನು ಇಂಜಾಡಿಯಲ್ಲಿ ನಿರ್ಮಿಸಲು ಮಹಾನಕ್ಷೆಯಲ್ಲಿ ಜಾಗ ಗುರುತಿಸಿರುವುದರಿಂದ, ಸದರಿ ಜಾಗದಲ್ಲಿ 200 ಕೊಠಡಿಗಳ 4 ಬ್ಲಾಕ್ ಕಟ್ಟಡಗಳನ್ನು ದೇವಸ್ಥಾನ ನಿಧಿ ಮತ್ತು ದಾನಿಗಳಿಂದ ಪಡೆದು ನಿರ್ಮಿಸಿಕೊಳ್ಳಲು ಸೂಕ್ತ ಪ್ರಸ್ತಾವನೆ ಸಿದ್ದಪಡಿಸಲು ಸೂಚಿಸಿ ಈ ನಿರ್ಮಾಣ ಕಾಮಗಾರಿಯ ನಿವೇಶನವನ್ನು ಪರಿಶೀಲಿಸಿಕೊಂಡು ಈಗಾಗಲೇ ತಯಾರಿಸಿರುವ ನಕ್ಷೆಗಳನ್ನು ಮರು ಪರಿಶೀಲನೆ ನಡೆಸಿ ಮಿತವ್ಯಯದ ಹಾಗೂ ಬಾಳಿಕೆಯ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಕಟ್ಟಡಗಳನ್ನು ನಿರ್ಮಿಸಲು ತೀರ್ಮಾನಿಸಲಾಗಿರುತ್ತದೆ.<br><br>• ಮುಂದುವರೆದು ದೇವಸ್ಥಾನದ ಹಣದ ಲಭ್ಯತೆಯನ್ನು ಗಮನಿಸಿಕೊಂಡು 4 ಬ್ಲಾಕ್ ಕಟ್ಟಡವನ್ನು ನಿರ್ಮಿಸಲು, ಇದರೊಂದಿಗೆ ನಿರ್ಮಾಣಕ್ಕೆ ದಾನಿಗಳು ಮುಂದೆ ಬಂದಲ್ಲಿ ಪ್ರತಿ ಕಟ್ಟಡದ ಪೂರ್ಣ ವೆಚ್ಚದಲ್ಲಿ ಒಂದು ಕೊಠಡಿಗೆ ತಗಲುವ ವೆಚ್ಚವನ್ನು ನಿಗಧಿಪಡಿಸಿಕೊಂಡು ಸಾರ್ವಜನಿಕ ಪ್ರಕಟಣೆ ನೀಡಿ ದಾನಿಗಳಿಗೆ ಹಣದ ಕ್ರೋಢೀಕರಣಕ್ಕಾಗಿ ಕ್ರಮವಹಿಸಲು ಮತ್ತು ನಿರ್ಮಿಸಲಾಗುವ ಕಟ್ಟಡಗಳನ್ನು ಎತ್ತರದ G+6 ಮಹಡಿ ಇರುವಂತೆ ನಿರ್ಮಾಣ ಮಾಡಲು ತೀರ್ಮಾನಿಸಲಾಗಿರುತ್ತದೆ.<br><br>• ದೇವಸ್ಥಾನದ ಡಾರ್ಮಿಟರಿ ' ಅನಂತ ' ಮಾದರಿಯಲ್ಲಿ ಒಂದು ಕೊಠಡಿಯಲ್ಲಿ ಕನಿಷ್ಠ 10 ಜನ ತಂಗುವ ರೀತಿ 50 ಕೊಠಡಿಗಳನ್ನು ಹೊಂದಿರುವ ಡಾರ್ಮಿಟರಿ ಕಟ್ಟಡ ನಿರ್ಮಿಸಲು ವಿನ್ಯಾಸ ರೂಪಿಸಿ ಮಲಗಲು ಎತ್ತರದ ಪ್ಲ್ಯಾಟ್‌ಫಾರಂಗಳನ್ನು ಹಾಗೂ ಲಗೇಜ್ ಬಾಕ್ಸ್ ಹೊಂದಿರುವ ಡಾರ್ಮಿಟರಿ ಕಟ್ಟಡವನ್ನು ನಿರ್ಮಿಸಲು ತೀರ್ಮಾನಿಸ ಲಾಗಿರುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | | **ಯಾತ್ರಾರ್ಥಿಗಳಿಗೆ ಮೂಲಭೂತ ಸೌಲಭ್ಯಗಳನ್ನು ಹೆಚ್ಚಿಸಲು ಈ ಕೆಳಕಂಡಂತೆ ತೀರ್ಮಾನಿಸಲಾಗಿರುತ್ತದೆ.**<br><br>• ದೇವಾಲಯಕ್ಕೆ ಸೇರಿದ ಸೂಕ್ತ ಸ್ಥಳವನ್ನು ಗುರುತಿಸಿ ಏಕ ಕಾಲದಲ್ಲಿ ಸುಮಾರು 3500 ಜನ ಭಕ್ತಾಧಿಗಳು ಪ್ರಸಾದ ಭೋಜನ ಸ್ವೀಕರಿಸುವ ರೀತಿ ಸುಸಜ್ಜಿತ ಅನ್ನ ದಾಸೋಹ ಭವನ ನಿರ್ಮಾಣ.<br>• 1 ಬ್ಲಾಕ್ 24 ಶೌಚಾಲಯಗಳು, 16 ಸ್ನಾನಗೃಹ, 4 ಬಟ್ಟೆ ಬದಲಾಯಿಸುವ ಕೊಠಡಿಗಳು ಒಳಗೊಂಡಿರುವ 4 ಬ್ಲಾಕ್ ಸಾರ್ವಜನಿಕ ಶೌಚಾಲಯ ನಿರ್ಮಾಣ.<br>• ಶ್ರೀ ದೇವಳದಲ್ಲಿ ಪ್ರತ್ಯೇಕ ಸರ್ಪ ಸಂಸ್ಕಾರ ಬಯಸುವ ಭಕ್ತಾಧಿಗಳಿಗೆ ಯಾಗಶಾಲೆ ನಿರ್ಮಾಣ ಮಾಡಲು ಉದ್ದೇಶಿಸಲಾಗಿದ್ದು, ಈ ನಿಟ್ಟಿನಲ್ಲಿ ಕನಿಷ್ಠ 500 ಪ್ರತ್ಯೇಕ ಸರ್ಪ ಸಂಸ್ಕಾರ ಸೇವೆ ಮಾಡಲು ಮತ್ತು 1000 ಸಾಮೂಹಿಕ ಸರ್ಪ ಸಂಸ್ಕಾರ ಸೇವೆ ನೆರವೇರಿಸುವ ಯಾಗ ಶಾಲೆಯನ್ನು ನಿರ್ಮಿಸಲು ಹಾಗೂ ಈ ಧಾರ್ಮಿಕ ಕಾರ್ಯದಲ್ಲಿ ಪಾಲ್ಗೊಳ್ಳುವವರಿಗೆ ಸೂಕ್ತವಾದ ವಸತಿಗೃಹ ಮತ್ತು ಉಟೋಪಚಾರಕ್ಕೆ ಅಗತ್ಯವಿರುವ ವ್ಯವಸ್ಥೆ.<br>• ಭಕ್ತಾಧಿಗಳ ದಟ್ಟಣೆಯನ್ನು ಸರಳೀಕರಿಸಲು ಸೂಕ್ತ Q ಕಾಂಪ್ಲೆಕ್ಸ್ ನಿರ್ಮಾಣ ಮಾಡಲು ಆಗಮನ ದ್ವಾರದಲ್ಲಿ 4-5 ಪ್ರತ್ಯೇಕ ಹಾಲ್‌ಗಳನ್ನು ನಿರ್ಮಿಸಿ ಅದರ ಮುಂಭಾಗದಲ್ಲಿ Food court ಇರುವಂತೆ ವಿನ್ಯಾಸಗೊಳಿಸಲು ಮತ್ತು ಇದರಲ್ಲಿ ಸೂಕ್ತ ಮೂಲಭೂತ ವ್ಯವಸ್ಥೆ ಇರುವಂತೆ Q System ವಿನ್ಯಾಸ.<br>• ಭಕ್ತಾಧಿಗಳು ಪೂರ್ವ ದ್ವಾರದಲ್ಲಿ ಪ್ರವೇಶಿಸಿ ದರ್ಶನ ಪಡೆದು ಪಶ್ಚಿಮ ದ್ವಾರದಲ್ಲಿ ತೆರಳಲು ಅನುಕೂಲವಾಗುವಂತೆ ಒತ್ತಡ ನಿಯಂತ್ರಿಸಲು ದರ್ಪಣತೀರ್ಥ ನದಿಗೆ ಸೇತುವೆ ನಿರ್ಮಾಣ ಹಾಗೂ ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಈ ಕಾಮಗಾರಿಯನ್ನು ಆದ್ಯತೆ ಮೇರೆಗೆ ಕೈಗೊಳ್ಳಲು ತೀರ್ಮಾನಿಸಿ ಅನುದಾನವನ್ನು ಸಣ್ಣ ನೀರಾವರಿ ಇಲಾಖೆ (Minor Irrigation Department) ನಿಂದ ಪಡೆಯಲು ಪರಿಶೀಲಿಸಲಾಗುತ್ತಿದೆ. |

ಸಂಖ್ಯೆ: ಕಂಇ 44 ಮುಸಪ್ರ 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು